ರೀತಿ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ರಾಜೀವ್‌ಗಾಂಧಿ ಯೂನಿವರ್ಸಿಟಿಯಿಂದ ಯಾವ ಸಂಸ್ಥೆಗೆ ಕೊಡಬೇಕೆಂದು ರೆಕಮಂಡ್ ಮಾಡಿದ್ದರೋ ಅಲ್ಲಿಗೆ ಪರ್ಮಿಷನ್ ಕೊಡಲಿಲ್ಲ. ನಮ್ಮಗದುಗಿನ ತೋಂಟದಾರ್ಯ ಶಿಕ್ಷಣ ಸಂಸ್ಥೆಗೆ ರೆಕಮಂಡ್ ಮಾಡಿದ್ದರು, ಆದರೂ ಕೊಟ್ಟಿಲ್ಲ. ಏಕೆ ಕೊಡಲಿಲ್ಲ? ಉತ್ತರ ಕರ್ನಾಟಕದಿಂದ ಯಾವ ಅರ್ಜಿಯೂ ಇಲ್ಲವೆಂದು ಹೇಳುತ್ತೀರಿ. ಈ ಕಾರಣದಿಂದ ಉತ್ತರ ಕರ್ನಾಟಕಕ್ಕೆ ಬಹಳ ಅನ್ಯಾಯ ಮಾಡುತ್ತಿದ್ದೀರಿ. ದಯವಿಟ್ಟು ಅದನ್ನು ಸರಿಪಡಿಸುತ್ತೀರಾ ಎನ್ನುವುದನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಡಾ। ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕವನ್ನು ಶೈಕ್ಷಣಿಕವಾಗಿ ಅಭಿವೃದ್ಧಿ ಮಾಡಬೇಕೆನ್ನುವಂಥ ಕಮಿಟ್‌ಮೆಂಟ್ ನಮ್ಮ ಸರ್ಕಾರದಲ್ಲಿದೆ. ಹೊಸದಾಗಿ ಕಾಲೇಜುಗಳನ್ನು ಮಂಜೂರು ಮಾಡುವಂಥ ಸಂದರ್ಭದಲ್ಲಿ ಅದನ್ನು ಗಮನದಲ್ಲಿಟ್ಟುಕೊಂಡೇ ಮಾಡಿದ್ದೇವೆ. ಕಾಲೇಜುಗಳನ್ನು ಕೊಡುತಕ್ಕಂಥ ಸಂದರ್ಭದಲ್ಲಿ ಎ.ಐ.ಟಿ.ಇ.ಸಿ. ನಿಯಮ ಇರಬಹುದು, ಮೆಡಿಕಲ್ ಕೌನ್ಸಿಲ್‌ನ ನಿಯಮ ಇರಬಹುದು, ಈ ನಿಯಮವನ್ನು ಪರಿಪಾಲನೆ ಮಾಡತಕ್ಕಂಥವರು ಅಥವಾ ಆ ನಿಯಮವನ್ನು ಅನುಸರಣೆ ಮಾಡಿ ಆ ಚೌಕಟ್ಟಿನಲ್ಲಿ ಬರತಕ್ಕಂಥವರಿಗೆ ಖಂಡಿತವಾಗಿ ನಾವು ಎನ್.ಒ.ಸಿ. ಕೊಟ್ಟಿದ್ದೇವೆ. ಕೆಲವೊಂದು ಕಾರಣಕ್ಕಾಗಿ ಅಂದರೆ ಕಾಲೇಜು ಪ್ರಾರಂಭ ಮಾಡಲಿಕ್ಕೆ ಅರ್ಜಿ ಕೊಟ್ಟವರು 5 ಕೋಟಿ ರೂಪಾಯಿಗಳನ್ನು ಇಡಬೇಕು, ಅಥವಾ 5 ಎಕರೆ, 10 ಎಕರೆ ಜಮೀನು ಇಡಬೇಕೆನ್ನುವ ನಿಯಮವನ್ನು ಕೆಲವು ಕಾಲೇಜುಗಳಿಂದ ಬಂದಂಥ ಅರ್ಜಿಗಳು ಅದನ್ನು ಪಾಲಿಸಿಲ್ಲ. ಮತ್ತೆ ಅದನ್ನು ಮಾಡಿದ ನಂತರ ಪರಿಗಣಿಸುತ್ತೇವೆಂಬ ಕಾಗದವನ್ನು ಈಗಾಗಲೇ ಸರ್ಕಾರ ಬರೆದಿದೆ. ಆ ಒಂದು ಚೌಕಟ್ಟಿಗೆ ಬಂದನಂತರ ಅವರ ಅರ್ಜಿಗಳನ್ನು ಕೂಡ ಕನ್‌ಸಿಡರ್ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ಗದಗ್‌ನ ತೋಂಟದಾರ್ಯ ಎಜುಕೇಷನ್ ಸೊಸೈಟಿಗೆ ರಾಜೀವ್‌ಗಾಂಧಿ ಯೂನಿವರ್ಸಿಟಿಯವರೇನು ರೆಕಮೆಂಡ್ ಮಾಡಿದ್ದಾರೆ, ಅದನ್ನಾದರೂ ಕೊಡುತ್ತೀರಾ?

ಡಾ। ಜಿ. ಪರಮೇಶ್ವರ್: ಯಾವುದನ್ನು ಯೂನಿವರ್ಸಿಟಿಯವರು ರೆಕಮೆಂಡ್ ಮಾಡಿದ್ದಾರೆಯೋ, ಆ ರೆಕಮೆಂಡೇಷನ್ನಿನ ಆಧಾರದ ಮೇಲೆ ಖಂಡಿತವಾಗಿಯೂ ಕನ್‌ಸಿಡರ್ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ನಮಗೆ ಎನ್.ಓ.ಸಿ. ಕೊಟ್ಟರೆ ಸಾಕು.

ಕಮಲಾಪುರ ಕ್ಷೇತ್ರದ ಹಾಗೂ ತಾಂಡಾಗಳಲ್ಲಿ ನೀರಿನ ಸೌಲಭ್ಯ ಒದಗಿಸುವುದು

100(869) ಶ್ರೀ ರೇವೂನಾಯಕ್ ಬೆಳಮಗಿ (ಕಮಲಾಪುರ): ಮಾನ್ಯ ಗ್ರಾಮೀಣಾ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದಲ್ಲಿ ನೀರು ಸರಬರಾಜನ್ನು ಎಷ್ಟು ಹಳ್ಳಿಗಳಿಗೆ ಹಾಗೂ ತಾಂಡಾಗಳಿಗೆ ನೀರು ಸರಬರಾಜು ಮಾಡಲಾಗಿದೆ : ಮಾಡದಿದ್ದರೆ ಯಾವಾಗ ಸರಬರಾಜು ಮಾಡಲಾಗುವುದು;

ಆ) ಇದರಲ್ಲಿ ಅರ್ಧಕ್ಕೆ ನಿಂತ ಕೆಲಸಗಳು ಎಷ್ಟು; ಮಹಾಗಾಂವ್‌ವಾಡಿ, ಮಹಾಗಾಂವ್‌ತಾಂಡಾ, ದಿನಸಿತಾಂಡ ನೆಲಕೂಡ ಪ್ರದೇಶಗಳಲ್ಲಿ ಅರ್ಧಕ್ಕೆ ನಿಂತ ಕೆಲಸಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದಲ್ಲಿ 158 ಗ್ರಾಮೀಣ ಜನವಸತಿಗಳಿಗೆ ನೀರು ಸರಬರಾಜು ಮಾಡಲಾಗಿದೆ.

ಆ) ಅರ್ಧಕ್ಕೆ ನಿಂತ ಕೆಲಸಗಳು ಯಾವುವು ಇಲ್ಲಾ. ಮಹಾಗಾಂವ್‌ವಾಡಿ, ಮಹಾಗಾಂವ್‌ತಾಂಡಾ, ದಿನಸಿತಾಂಡ ಮತ್ತು ನೆಲಕೂಡ ಗ್ರಾಮಗಳಿಗೆ ನೀರು ಸರಬರಾಜು ಯೋಜನೆಗಳನ್ನು ಒದಗಿಸಲಾಗಿದೆ. ಆದರೆ ಮಹಾಗಾಂವ್ ವಾಡಿಯ ರೈಸಿಂಗ್ ಮೈನ್‌ಗೆ ರಸ್ತೆ ಕಾಮಗಾರಿಯಿಂದಾಗಿ ಧಕ್ಕೆಯುಂಟಾಗಿರುವುದರಿಂದ ಮತ್ತು ನೆಲಕೂಡ ಗ್ರಾಮದ ಜಲಮೂಲವನ್ನು ಕಿಡಿಗೇಡಿಗಳು ಹಾಳು ಮಾಡಿರುವುದರಿಂದ, ಸದರಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದ್ದು, ಈ ಯೋಜನೆಗಳನ್ನು ಪುನಶ್ಚೇತನಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ರೇವು ನಾಯಕ್ ಬೆಳಮಗಿ: ಮಾನ್ಯ ಮಂತ್ರಿಗಳು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಅರ್ಧಕ್ಕೆ ನಿಂತ ನಾಲ್ಕು ಕೆಲಸಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ಅದು ನಾಲ್ಕನೇ ವರ್ಷದ ಕೆಲಸ. ನಾನು ಎಂಎಲ್‌ಎಯಾಗಿ ಆರಿಸಿ ಬಂದನಂತರ, ಮಹಾಗಾಂವ್‌ವಾಡಿಯಲ್ಲಿ ಜನರು ನಮಗೆ ನೀರು ಕೊಟ್ಟ ನಂತರ ನಮ್ಮ ಊರಿಗೆ ಬನ್ನಿ ಎಂದು ನನ್ನನ್ನು ವಾಪಸ್ ಕಳುಹಿಸಿದ್ದಾರೆ. ಇಲ್ಲಿಯವರೆಗೆ ಅಲ್ಲಿ ನೀರಿನ ವ್ಯವಸ್ಥೆ ಮಾಡಿಲ್ಲ. ಆದರೆ, ಸಚಿವರು ತಪ್ಪು ಮಾಹಿತಿ ಕೊಟ್ಟಿದ್ದಾರೆ. ಎಲ್ಲಾ ಹಳ್ಳಿಗಳಿಗೂ ನೀರು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಕೀಣೆಸುಲ್ತಾನ, ಆಳಂದ, ಗೋಲ್ಲುಂದ, ಕಲ್‌ಮುರ್ಗ್‌ಗೆ ನೀವೇ ಸ್ಯಾಂಕ್ಷನ್ ಮಾಡಿದ ಹಣವಿದ್ದರೂ, ಕೆಲಸ ಶುರುವಾಗಿಲ್ಲ. ಇದರ ಬಗ್ಗೆ ಸರ್ಕಾರವೇನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಂ.ವೈ. ಘೋರ್ಪಡೆ: ಇದರಲ್ಲಿ ತಪ್ಪು ಮಾಹಿತಿ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ನಾವು ಕೊಟ್ಟಿರುವ ಮಾಹಿತಿ ನೂರಕ್ಕೆ ನೂರರಷ್ಟು ಸರಿಯಿದೆ. ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಈಗಾಗಲೇ 158 ಗ್ರಾಮಗಳಲ್ಲಿ ನೀರಿನ ವ್ಯವಸ್ಥೆ ಇದೆ. ವಾಟರ್‌ಸಪ್ಲೈ ಸ್ಕೀಂ ಸಿಡಬ್ಲ್ಯೂಎಸ್ 60:67 ಇದ್ದು, ಮಿನಿವಾಟರ್ ಸಪ್ಲೈ ಸ್ಕೀಂ 94, ಬೋರ್‌ವೆಲ್ 851 ಇವೆ. ಇಷ್ಟಂತೂ ಸದ್ಯಕ್ಕಿದೆ. ಈಗ ಆದರಲ್ಲಿ ನಾಲ್ಕು ಗ್ರಾಮಗಳಲ್ಲಿ ನಿಮಗೆ ಸ್ವಲ್ಪ ತೊಂದರೆಯಾಗುತ್ತಿದೆ. ಹಾಗೆಂದ ಮಾತ್ರಕ್ಕೆ ಕೆಲಸವಾಗಿಲ್ಲವೆಂದಲ್ಲ. ಕೆಲಸವಾದ ಮೇಲೆ ಅಲ್ಲಿ ಏನು ಅನಾಹುತ ನಡೆಯಿತು, ಅದರಿಂದ ಸ್ವಲ್ಪ ತೊಂದರೆಯಾಗುತ್ತಿದೆ. ಅದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ, ಇದಲ್ಲೇನಾದರೂ ತಪ್ಪಿದ್ದರೆ ತಾವು ಹೇಳಬಹುದು. ಕೆಲಸ ಮುಗಿಸಿದ ನಂತರ,

ಮಹಾಗಾಂವ್‌ವಾಡಿಯಲ್ಲಿ ರೈಸಿಂಗ್ ಮೈನ್ ಏನಿದೆ ಅದು ಡ್ಯಾಮೇಜಾಗಿದೆ. ಹಣದ ಅಭಾವದಿಂದ ಕೆಲಸ ಅಪೂರ್ಣವಾಗಿ ನಿಂತ ಪ್ರಶ್ನೆ ಇಲ್ಲ. ಅದನ್ನು ಮತ್ತೆ ರಿಪೇರಿ ಮಾಡುವುದಕ್ಕೋಸ್ಕರ 1,50,000 ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದನ್ನು ರಿಪೇರಿ ಮಾಡುತ್ತಿದ್ದಾರೆ. ಮಹಾಗಾಂವ್ ತಾಂಡದಲ್ಲಿ ಒಂದು ವಾಟರ್‌ಸಪ್ಲೈ ಸೋರ್ಸ್ ಇದ್ದು, ಅದು ಮುಚ್ಚಿಹೋಗಿದೆ. ಆಲ್ಟರ್‌ನೇಟ್ ಸೋರ್ಸ್ ಮಾಡಿ, ಈ ಸಪ್ಲೈ ಏನಿದೆ ಅದನ್ನು ರೆಸ್ಟೋರ್ ಮಾಡಿದ್ದೇವೆ. ಸೋರ್ಸ್ ಬತ್ತಿಹೋದರೆ ಯಾರೇನೂ ಮಾಡಲಿಕ್ಕಾಗಲ್ಲ. ದಿನಸಿತಾಂಡದಲ್ಲಿ ಪೈಪ್ ಅನ್ನು ಎಕ್ಸ್‌ಟೆಂಡ್ ಮಾಡಬೇಕೆಂದು ಇಂಜಿನಿಯರ್ಸ್ ಹೇಳುತ್ತಿದ್ದಾರೆ. ಅದು ಮಿನಿ ವಾಟರ್‌ಸಪ್ಲೈ ಸ್ಕೀಂನಡಿಯಲ್ಲಿದ್ದು, ಸದ್ಯಕ್ಕೆ ನೀರು ಸಿಗುತ್ತಿದೆ, ಇನ್ನೂ ಸ್ವಲ್ಪ ನೀರು ಕೊಡುವ ದೃಷ್ಟಿಯಿಂದ ಆ ಪೈಪ್ ಅನ್ನು ಎಕ್ಸ್‌ಟೆಂಡ್ ಮಾಡುತ್ತಿದ್ದೇವೆ. ನೀಲ್‌ಕುಂದದಲ್ಲಿ ಗ್ರಾಮಸ್ಥರು ಕಲ್ಲು ಹಾಕಿದ್ದಾರೆ. ನೀರಿನ ಸೋರ್ಸಿಗೆ ಕಲ್ಲು ಹಾಕಿ ತುಂಬಿದರೆ, ನಾವು ಮಾಡಿದ್ದಕ್ಕೆಲ್ಲಾ ಕಲ್ಲು ಹಾಕುವುದಾದರೆ ಯಾವ ವಾಟರ್‌ಸಪ್ಲೈ ಸ್ಕೀಂ ಸಹ ಯಶಸ್ವಿಯಾಗಲಿಕ್ಕಿಲ್ಲ. ಇದರ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ವಿನಂತಿಸುವುದೇನೆಂದರೆ, ಈ ಕಲ್ಲು ಹಾಕುವ ಕೆಲಸ ಬಹಳ ದುರ್ದೈವದ ಸಂಗತಿ ಇದ್ದು, ಯಾವ ಕಾರಣಕ್ಕಾಗಿ ಹಾಕಿದ್ದಾರೆ, ಅಂಥ ಕೆಲಸವನ್ನು ಮಾಡದಂತೆ ಅವರು ನೋಡಿಕೊಳ್ಳಲಿ ಎಂದು ನಾನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಶ್ರೀ ರೇವುನಾಯಕ್ ಬೆಳಮಗಿ: ಅವರು ಸರ್ಕಾರದ ಅಧಿಕಾರಿಗಳು ಕೊಟ್ಟ ಉತ್ತರವನ್ನು ಹೇಳಿದ್ದಾರೆ. ಆದರೆ, ಸತ್ಯ ಸಂಗತಿಯನ್ನು ನಾನು ಹೇಳುತ್ತೇನೆ. ತಾಂಡಕ್ಕೆ ನೀರಿಗಾಗಿ ಬೋರ್ ಹಾಕುತ್ತೇವೆಂದು ಹೇಳುತ್ತಾರೆ. ಬೋರ್ ಹಾಕಬೇಕೆಂಬುದು ಸುಳ್ಳು. ತಾಂಡ ಸೇರಿ ಒಂದೇ ನಲ್ಲಿ ಕೊಟ್ಟಿದ್ದಾರೆ. ಅಲ್ಲಿ ಎಲ್ಲರೂ ಕಚ್ಚಾಡುತ್ತಿದ್ದಾರೆ. ಮಹಾಗಾಂವ್‌ವಾಡಿಯಲ್ಲಿ ಕಂಪ್ಲೀಟಾಗಿ ಕೆಲಸ ಮುಗಿಸಿದ್ದರು. ಕಳಪೆ ದರ್ಜೆಯ ಪೈಪ್ ಹಾಕಿದ್ದರಿಂದ, ಪೈಪ್ ಡ್ಯಾಮೇಜಾಗಲು ಶುರುವಾಗಿದೆ. ಆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ, ಸೆಕ್ರೆಟರಿಯವರಿಗೆ ಹೇಳಿದರೆ, ಹಣ ಕೊಟ್ಟರೆ ಹ್ಯಾಂಡ್-ಓವರ್ ಮಾಡಿಕೊಡುತ್ತೇವೆಂದು ಹೇಳುತ್ತಾರೆ. ನಾನು ಮಾರ್ನಿಂಗ್ ಮಾಡಿ, ಹ್ಯಾಂಡ್-ಓವರ್ ಮಾಡಿಕೊಳ್ಳಬೇಡಿ ಎಂದು ಹೇಳಿದ್ದೇನೆ. ನಮಗೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ದಿನಸಿ ತಾಂಡದಲ್ಲಿ ಊರಬದಿಯಲ್ಲಿ ನಲ್ಲಿ ಹಾಕಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ: ಅಲ್ಲಿ ಏನೇನು ಮಾಡಿದ್ದೇವೆಂದು ನಾನು ಹೇಳಿದ್ದೇನೆ. ಅಲ್ಲಿ ರಿಪೇರಿ ಕೆಲಸ ಮಾಡಿಸುತ್ತಿದ್ದೇವೆ.

ಶ್ರೀ ಎ. ರಾಮದಾಸ್: ಅವರು ಇದನ್ನು ಕೇಳುತ್ತಲೇ ಬಂದಿದ್ದಾರೆ. ಟೆಕ್ನಿಕಲ್ ಉತ್ತರ ಕೊಡುತ್ತಲೇ ಇದ್ದರೆ, ಅವರ ಪರಿಸ್ಥಿತಿ ಏನು? ನಮಗೆ ಉತ್ತರವೇ ಬೇಡ, ಇಂಥ ದಿವಸದಲ್ಲಿ ಈ ನಾಲ್ಕು ಗ್ರಾಮಗಳಿಗೆ ನೀರಿನ ವ್ಯವಸ್ಥೆ ಮಾಡುತ್ತೇವೆಂದು ಹೇಳಿ ಸಾಕು. ಎರಡು ವರ್ಷಗಳಿಂದ ಈ ಒಂದು ಕ್ಷೇತ್ರದಿಂದ ಬಂದವರು ಕೇಳುತ್ತಲೇ ಇರಬೇಕೆಂದರೆ, ಎಷ್ಟು ನೋವಾಗುತ್ತದೆ?

Sri M.Y. Ghorpade: I have already given full details. ಏಕೆ ತೊಂದರೆಯಾಯಿತು? ಅದನ್ನು ಸರಿಪಡಿಸಲು ಏನು ಮಾಡುತ್ತಿದ್ದೇವೆಂಬ ಬಗ್ಗೆ ನಾನು ಹೇಳಿದ್ದೇನೆ. ನಾವು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಸಣ್ಣ ಸಣ್ಣ ಕಾರಣಗಳಿಗಾಗಿ ನೀರು

ನಿಂತುಹೋಗಿರುತ್ತದೆ. ರೈಸಿಂಗ್ ಮೈನ್ ಅನ್ನು ರಿಪೇರಿ ಮಾಡಿಸುತ್ತಿದ್ದೇವೆ. ಕೆಲವು ಕಡೆ ಸೋರ್ಸ್ ಇಲ್ಲ, ಅಲ್ಲಿ ಬೇರೆ ಸೋರ್ಸ್ ಹುಡುಕಿ ನೀರು ಕೊಡುತ್ತಿದ್ದೇವೆ. ಇನ್ನೇನು ಮಾಡಬೇಕು?

ಶ್ರೀ ರೇವು ನಾಯಕ್ ಬೆಳಮಗಿ: ಯಾವಾಗ ಆ ಕೆಲಸ ಮುಗಿಸುತ್ತಾರೆ?

Mr. Speaker: I cannot compel the Minister to answer like this or like that.

(ಈ ಹಂತದಲ್ಲಿ ಸದಸ್ಯರಾದ ಶ್ರೀ ರೇವು ನಾಯಕ್ ಬೆಳಮಗಿಯವರು ಸದನದ ಬಾವಿಗೆ ತೆರಳಿದರು.)

ಅಧ್ಯಕ್ಷರು: ಉತ್ತರವನ್ನು ಪರ್ಫೆಕ್ಟಾಗಿ ಹೇಳಿದ್ದೇವೆಂದು ಸಚಿವರು ಹೇಳಿದ ಮೇಲೆ, I cannot compel the Minister. Don't encourage such attitude.

Sri S. Suresh Kumar: You should understand his helplessness. ಅವರೇನು ತಪ್ಪು ಮಾಡಿದ್ದಾರೆ?

ಅಧ್ಯಕ್ಷರು: ಅವರು ಅಷ್ಟೇ ಉತ್ತರ ಕೊಡುವುದೆಂದು ಹೇಳಿದ ಮೇಲೆ ಏನು ಮಾಡಲಿ?

ಶ್ರೀ ಎಸ್. ಸುರೇಶ್ ಕುಮಾರ್: ಅವರ ಸ್ಥಿತಿ ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು: ನನಗೂ ಅರ್ಥವಾಗುತ್ತದೆ. ನನಗೇನೂ ಅರ್ಥವಾಗುವುದಿಲ್ಲವೆಂದು ಹೇಳಬೇಕಾಗಿಲ್ಲ. ಪ್ರತಿಯೊಬ್ಬ ಮೆಂಬರ್ ಸಹ ಅವರವರ ಪ್ರಶ್ನೆ ಕೇಳಿದಾಗ, ಹೀಗೆ ನಿಂತುಕೊಂಡರೆ ಹೇಗೆ? Go to the chamber of the concerned Minister and have a detailed discussion. ಮಂತ್ರಿಗಳ ಹತ್ತಿರ ಹೋಗಿ ಮಾತನಾಡಿ. I cannot compel the Minister to answer like this or like that. ಅವರು ಸಾಲ್ವ್ ಮಾಡುತ್ತಾರೆ. ಅವರು ನಿಮ್ಮ ಛೇಂಬರ್ಸ್‌ಗೆ ಬರುತ್ತಾರೆ.

ಶ್ರೀ ಎಂ.ವೈ. ಘೋರ್ಪಡೆ: ಆಗಬಹುದು.

(ಈ ಹಂತದಲ್ಲಿ ಶ್ರೀ ರೇವು ನಾಯಕ್ ಬೆಳಮಗಿಯವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

ಮುಲ್ಕಿ ಹೋಬಳಿಯ ಗ್ರಾಮಗಳಿಗೆ ಶಾಶ್ವತ ನೀರು ಸರಬರಾಜು

154(1610) ಶ್ರೀ ಅಭಯಚಂದ್ರ ಕೆ (ಮೂಡಬಿದಿರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಹೋಬಳಿಯ 9 ಗ್ರಾಮಗಳಿಗೆ ಶಾಶ್ವತ ನೀರು ಒದಗಿಸಿ ಸಕಾಲದಲ್ಲಿ ನೀರು ಸರಬರಾಜು ಮಾಡುವ ಯೋಜನೆ ಹಾಗೂ ಸರ್ವೆ ಕೆಲಸದ ಕಾರ್ಯ ಯಾವ ಹಂತದಲ್ಲಿರುತ್ತದೆ;